ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತನೆಯ ಅಧಿವೇಶನ

ಶುಕ್ರವಾರ, ದಿನಾಂಕ : 06 ನೇ ಮಾರ್ಚ್, 2020

ಮಂಡ್ಯ ಜಿಲ್ಲೆಗೆ ಸಂಬಂಧಿಸಿದ ಲೆಕ್ಕ ಶೀರ್ಷಿಕೆ 3054 ಅಡಿ ಕಾಮಗಾರಿಯ ವಿವರ

ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ):-

316 (401) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) 2017-2018ನೇ ಸಾಲಿನಲ್ಲಿ ಮಂಡ್ಯ ಜಿಲ್ಲೆಗೆ ಲೆಕ್ಕ ಶೀರ್ಷಿಕೆ 3054 ಅಡಿಯಲ್ಲಿ (ಗ್ರಾಮೀಣ ರಸ್ತೆಗಳ ದರುಸ್ಥಿ/ನಿರ್ವಹಣೆ) ಮಂಜೂರಾದ ಕಾಮಗಾರಿಗಳ ಸಂಖ್ಯೆ ಎಷ್ಟು ; ಅದರ ಒಟ್ಟು ಮೊತ್ತವೆಷ್ಟು ;

(ಆ) ಸದರಿ ಕಾಮಗಾರಿಯ ಉಸ್ತುವಾರಿಯನ್ನು ಯಾವ ಯಾವ ಸರ್ಕಾರಿ ಅಂಗ ಸಂಸ್ಥೆಗಳಿಂದ ನಿರ್ವಹಿಸಲು ಆದೇಶಿಸಲಾಗಿದೆ; (ಪ್ರತ್ಯೇಕವಾಗಿ ವಿವರ ನೀಡುವುದು)

(ಇ) ಇದುವರೆವಿಗೂ ಅನುಮೋದನೆಗೊಂಡ ಎಷ್ಟು ಕಾಮಗಾರಿಗಳಿಗೆ ಎಷ್ಟು ಮೊತ್ತದ ಅನುದಾನವನ್ನು ಬಿಡುಗಡೆಗೊಳಿಸಲಾಗಿದೆ ; (ಪ್ರತ್ಯೇಕವಾಗಿ ವಿವರ ನೀಡುವುದು)

(ಈ) ಉಳಿಕೆ ಮೊತ್ತವನ್ನು ಬಿಡುಗಡೆ ಮಾಡುವಲ್ಲಿ ವಿಳಂಬ ಉಂಟಾಗಲು ಕಾರಣಗಳೇನು ;

(ಉ) ಯಾವ ಕಾಲಮಿತಿಯಲ್ಲಿ ಉಳಿಕೆ ಮೊತ್ತವನ್ನು ಬಿಡುಗಡೆಗೊಳಿಸಲಾಗುವುದು ?